ದೇಸಿಯ ಹಲವು ಚಹರೆಗಳನ್ನು ನಂಬಿ ಹೇಳ್ತಾ ಇದ್ದಾನೆ. ಯಾವುದನ್ನು ದೋಷ ಅಂತ ಹೇಳ್ತಾನೆ, ಆ ದೋಷ ಯಾವುದು ಅಂತಂದ್ರೆ ಪಳಗನ್ನಡವನ್ನು ಬಳಸೋದು. ಕವಿರಾಜಮಾರ್ಗಕಾರನ ಕಾಲದಲ್ಲೇ ಕನ್ನಡಕ್ಕೊಂದು ಪಳಗನ್ನಡ (ಹಳಗನ್ನಡಕ್ಕೆ ಪೂರ್ವದಲ್ಲಿದ್ದ ಕನ್ನಡ) ಇತ್ತು. ನಾವು ಯಾವುದನ್ನು ಈಗ ಹಳಗನ್ನಡ ಅಂತಾ ಇದ್ದೀವಿ ಆ ಹಳಗನ್ನಡ ಅಲ್ಲ. ಕವಿರಾಜಮಾರ್ಗಕಾರನ ಕಾಲಕ್ಕಾಗಲೇ ಒಂದು ಹಳಗನ್ನಡ ಆಗಿಹೋಗಿತ್ತು. ಅವನು ಯಾವುದನ್ನು ದೋಷ ಅಂತಾ ಇದ್ದಾನೆ ಅಂತಂದ್ರೆ ಆ ಪಳಗನ್ನಡ ಇದೆಯಲ್ಲ, ಅದನ್ನು ನಿಮ್ಮ ಕಾಲಕ್ಕೆ ನೀವು ಸರಿಯಾಗಿ ಒಗ್ಗಿಸಿಕೊಳ್ತಾ ಇಲ್ಲ. ಅದನ್ನು ಆತ ದೋಷ ಅಂತಾ ಇದ್ದಾನೆ. ಅದನ್ನು ತಪ್ಪು ತಪ್ಪಾಗಿ ಬಳಸ್ತಾ ಇದ್ದೀರಿ. ಅಂದರೆ, ನಾವೀಗ 'ಅಹುದು' ಅಂತ ಬಳಸಿದ್ರೆ ಅದು ಅಷ್ಟು ಸರಿ ಕಾಣೋದಿಲ್ಲ. ಆ ರೀತಿ ಹೇಳ್ತಾ ಇದ್ದಾನೆ. ನಿನ್ನ ಕಾಲಕ್ಕೆ ಕನ್ನಡ ಹೇಗೆ ಬಳಸಬೇಕೊ ಹಾಗೆ ಬಳಸು ಅಂತಿದಾನೆ. ಪಳಗನ್ನಡವನ್ನು ಯಥಾವತ್ತಾಗಿ ಬಳಸೋದು ದೋಷ ಅಂತ ಹೇಳ್ತಾ ಇದಾನೆ. ಇವೆಲ್ಲ ಬಹಳ ಮುಖ್ಯವಾದ ಚರ್ಚೆಗಳು. ಯತಿಯನ್ನು ಬಿಡಬೇಕು ಅಂತ ಹೇಳ್ತಿದ್ದಾನೆ. ಆದಿಪ್ರಾಸ ಮತ್ತು ಅಂತ್ಯ ಪ್ರಾಸದ ಬಗ್ಗೆ ಹೇಳ್ತಾ ಇದ್ದಾನೆ. ಚತ್ತಾಣ ಬೆದಂಡೆ ಹೆಂಗೆ ಬಳಸ್ಬೇಕು ಅಂತ ಹೇಳ್ತಿದ್ದಾನೆ. ಕೆಲವರು ಕವಿರಾಜಮಾರ್ಗ ಅನ್ನೋ ಪದ ಇಟ್ಕೊಂಡು ಬಹಳ ಆಟ ಆಡಿದ್ದಾರೆ. ರಾಜಾಧಿಪತ್ಯದ ಆಶ್ರಯಕ್ಕೆ ಬಂದ ಭಾಷೆಯಿದು ಅಂತೆಲ್ಲ ಹೇಳಿದ್ದಾರೆ. ಇದೆಲ್ಲ ತಪ್ಪು. ಭಾಷೆಗೆ ಒಂದು ಶಕ್ತಿ ಸ್ವರೂಪ ಬರೋದು ಜನಬಳಕೆಯಿಂದಲೇನೆ ಹೊರತು ರಾಜಾಶ್ರಯದಿಂದ ಅಲ್ಲ ಅನ್ನೋದು ಕವಿರಾಜಮಾರ್ಗದ ವಾದ. ಹಾಗಾದರೆ, ಸಂಸ್ಕೃತಕ್ಕೆ ರಾಜಾಶ್ರಯ ಇತ್ತು. ಆದರೂ ಆರನೇ ಶತಮಾನದಿಂದ ಕನ್ನಡ ಭಾಷೆಗೆ ಯಾಕೆ ಇಲ್ಲಿ ಪ್ರಾಮುಖ್ಯತೆ ಬಂತು? ಈ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಮೊದಲ ಶಾಸನವಾದ ಹಲ್ಮಿಡಿ ಶಾಸನ ಇದೆಯಲ್ಲ, ಅದು ರಾಜ ಬರೆಸಿದ ಶಾಸನವಲ್ಲ. ಒಬ್ಬ ಸಣ್ಣ ಹೋರಾಟಗಾರ ಹೋರಾಟ ಮಾಡಿ ಬಂದ ಮೇಲೆ, ಅವನ ಕತ್ತಿಯನ್ನು ತೊಳೆದು ಕೊಟ್ಟರು ಅಂತ ಹೇಳೊ ಶಾಸನ ಅದು. ಇದು ಚಕ್ರವರ್ತಿಯ ಶಾಸನವಲ್ಲ. ಸಾಮಾನ್ಯ ಹೋರಾಟಗಾರನಿಗಾಗಿ ಬರೆದ ಶಾಸನವಿದು. ಇದರ ಭಾಷೆ ಕನ್ನಡ. ಅಂದರೆ, ಕನ್ನಡದ ಆಡುಮಾತುಗಳಲ್ಲಿ ಬಂದ ಬಹುಪಾಲು ಶಾಸನಗಳು ಸಾಮಾನ್ಯ ಸೈನಿಕರ ಬಗ್ಗೆ ಇವೆ. ಇಂಥ ಶಾಸನಗಳಲ್ಲಿ 'ಸ'ಕಾರವನ್ನು ಹೆಚ್ಚು ಬಳಸ್ತಾರೆ. ಅದನ್ನು ಕೂಡ ನಾವು ಗಮನಿಸಬೇಕು. 'ಶ' ಮತ್ತು 'ಷ' ಇಲ್ಲ ಅಲ್ಲಿ. 'ಸಸಿ' ಅಂತನೇ ಬಳಸಿದ್ದಾರೆ. ಹೆಂಗೆ ಮಾತಾಡಿದಾನೊ ಹಂಗೆ ಬರೆದಿದ್ದಾನವನು. 'ಸಿರ' ಅಂತ ಬರೀತಾನವನು. ಶಾಸನಗಳನ್ನ ಆಡುಮಾತಿನ ಹಿನ್ನೆಲೆಯಲ್ಲಿ ನೋಡಲಿಕ್ಕೆ ಹೊರಟೇ ಇಲ್ಲ ನಾವು. ಯಾವುದು ಕಲೋಕ್ವಿಯಲ್ ಭಾಷೆಯಾಗಿತ್ತು ಅದು ಶಾಸನದಲ್ಲಿ ಹೇಗೆ ಬಳಕೆಯಾಗಿದೆ ಅನ್ನೋದನ್ನು ನೋಡಲಿಕ್ಕೆ ಹೋಗಲಿಲ್ಲ. ಇದುವರೆಗೂ ಗಮನಿಸಿಲ್ಲ. ಹೀಗೆ ಮಾಡುವುದರಿಂದ ಆತ ನಮಗೊಂದು ಮುಖ್ಯ ಸೂಚನೆ ಕೊಡ್ತಾ ಇದ್ದಾನೆ. ಅದೇನಂದ್ರೆ, ರಾಜತ್ವದ ಸಂಬಂಧದಿಂದ ಭಾಷೆಗೆ ಒಂದು ಶಕ್ತಿ ಬರೋದಿಲ್ಲ. ಸಮುದಾಯದ ದೇಸಿ ಚಹರೆಯೇ ಅದಕ್ಕೊಂದು ದೊಡ್ಡ ಬಲ. ಬಾದಾಮಿ ಚಾಲುಕ್ಯರ ಕಾಲಕ್ಕೆ ಸೈನ್ಯವನ್ನು ಕರ್ನಾಟಕ ಬಲ ಅಂತ ಕರೆಯಲಾಗಿದೆ. ಅಂದರೆ, ಕನ್ನಡದ ಸೇನೆ ಅಂದಂತೆ. ರಾಜ ಕೂಡ ಸಂಸ್ಕೃತ ಬಿಟ್ಟು ಕನ್ನಡಕ್ಕೆ ಬರಬೇಕು ಅನ್ನೋ ಸೂಚನೆಯನ್ನು ಕೂಡ ಶಾಸನದ ಭಾಷೆಗಳು ಕೊಡುತ್ತಿವೆ. ಇನ್ನು ಕವಿರಾಜಮಾರ್ಗದಲ್ಲಿ ಹೇಳಲಾದ ಶಾಂತರಸವನ್ನು ಮುಂದಿನ ಕನ್ನಡ ಕಾವ್ಯ ಪರಂಪರೆ ದೊಡ್ಡದಾಗಿ ಬೆಳೆಸಿದೆ. ಹೀಗೆ ಒಂದು ಪರಂಪರೆಯನ್ನು ಬೆಳೆಸಿದ ಸತ್ವ ಕವಿರಾಜಮಾರ್ಗಕ್ಕಿದೆ. ಅದನ್ನು ನಾವು ನಮ್ಮ ಓದಿನಲ್ಲಿ ಸರಿಯಾಗಿ ಗ್ರಹಿಸಿಲ್ಲ. ಅದನ್ನು ಗ್ರಹಿಸಬೇಕಾದ ಅವಶ್ಯಕತೆ ಬಹಳ ದೊಡ್ಡ ಪ್ರಮಾಣದಲ್ಲಿದೆ.

◆ **ಇತ್ತೀಚೆಗೆ ನೀವು ಜೈನ ತತ್ತ್ವವಾದ ಅನೇಕಾಂತವಾದವನ್ನು ಒಂದು ವಿಮರ್ಶಾ ತತ್ತ್ವವಾಗಿ**